# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪ಎ | ಬೆಂಗಳೂರು, **ಸೋಮವಾರ, ೦೯, ಮಾರ್ಚ್**, ೨೦೨೬(ಫಾಲ್ಗುಣ, ೧೮, ಶಕವರ್ಷ, ೧೯೪೭) | ನಂ. ೧೯೮ |
|---|---|---|
| **Part – IVA** | BENGALURU, MONDAY, 09, MARCH, 2026 (**PHALGUNA**, 18, SHAKAVARSHA, 1947) | **No. 198** |


## ಕರ್ನಾಟಕ ಸರ್ಕಾರ

ಸಂಖ್ಯೆ:RD-LGP/49/2025 (Part-2)
(E-2082663)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಡಾ. ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 09.03.2026.

## ಅಧಿಸೂಚನೆ

ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ, 2011 (2014 ರ ಕರ್ನಾಟಕ ಅಧಿನಿಯಮ ಸಂ: 38)ರ 18ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ (ಅಧ್ಯಕ್ಷರು, ನ್ಯಾಯಿಕ ಮತ್ತು ಕಂದಾಯ ಸದಸ್ಯರ ನೇಮಕಾತಿ ಪ್ರಕ್ರಿಯೆ) ನಿಯಮಗಳು, 2026 ಅನ್ನು ರಚಿಸಲು ನಿಯಮಗಳ ಕರಡನ್ನು ದಿನಾಂಕ: 20.02.2026ರ ಕರ್ನಾಟಕ ರಾಜ್ಯಪತ್ರ ಸಂಖ್ಯೆ: 168ರ ಭಾಗ-IV Aರಲ್ಲಿ ಅಧಿಸೂಚನೆ ಸಂಖ್ಯೆ: RD-LGP/49/2025 (P-2) ದಿನಾಂಕ: 20.02.2026 ರಲ್ಲಿ ಪ್ರಕಟಿಸಿ, ಅದರಿಂದ ಬಾಧಿತರಾಗುವ ವ್ಯಕ್ತಿಗಳಿಂದ ಸದರಿ ಕರಡು ನಿಯಮಗಳ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಆಕ್ಷೇಪಣೆ ಅಥವಾ ಸಲಹೆಗಳನ್ನು ಆಹ್ವಾನಿಸಿರುವುದರಿಂದ;

ಮತ್ತು ದಿನಾಂಕ: 20.02.2026ರಂದು ಸದರಿ ರಾಜ್ಯಪತ್ರವು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡಿನ ಸಂಬಂಧದಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳು ಸ್ವೀಕೃತವಾಗದಿರುವುದರಿಂದ;

ಈಗ, ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ, 2011 (2014 ರ ಕರ್ನಾಟಕ ಅಧಿನಿಯಮ ಸಂ: 38)ರ 18ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ**.- (1) ಈ ನಿಯಮಗಳನ್ನು, ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ (ಅಧ್ಯಕ್ಷರು, ನ್ಯಾಯಿಕ ಮತ್ತು ಕಂದಾಯ ಸದಸ್ಯರ ನೇಮಕಾತಿ ಪ್ರಕ್ರಿಯೆ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳ ಅಂತಿಮ ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು. -** (1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಧಿನಿಯಮ" ಎಂದರೆ, ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ, 2011 (ಕರ್ನಾಟಕ ಅಧಿನಿಯಮ ಸಂಖ್ಯೆ 2014 ರ 38);

(ಬಿ) "ಅಧ್ಯಕ್ಷರು" ಎಂದರೆ, 7ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಅಧ್ಯಕ್ಷರು;

(ಸಿ) "ನ್ಯಾಯಿಕ ಸದಸ್ಯರು" ಎಂದರೆ ಜಿಲ್ಲಾ ನ್ಯಾಯಾಧೀಶರಾಗಿರುವ ಅಥವಾ ಆಗಿದ್ದ ವ್ಯಕ್ತಿ;

(ಡಿ) "ಕಂದಾಯ ಸದಸ್ಯರು" ಎಂದರೆ ಜಿಲ್ಲೆಯ ಜಿಲ್ಲಾಧಿಕಾರಿಯ ದರ್ಜೆಗಿಂತ ಕಡಿಮೆಯಿರದ ಹುದ್ದೆಯನ್ನು ಹೊಂದಿರುವ ಅಥವಾ ಹೊಂದಿದ್ದ ವ್ಯಕ್ತಿ;

(ಇ) "ಪರಿಶೀಲನಾ ಸಮಿತಿ" ಎಂದರೆ ಅಧ್ಯಕ್ಷರ ನೇಮಕಾತಿಗಾಗಿ ಹೆಸರುಗಳನ್ನು ಶಿಫಾರಸು ಮಾಡಲು ನಿಯಮ 4 ರ ಅಡಿಯಲ್ಲಿ ರಚಿಸಲಾದ ಸಮಿತಿ; ಮತ್ತು

(ಎಫ್) "ಆಯ್ಕೆ ಸಮಿತಿ" ಎಂದರೆ ನ್ಯಾಯಿಕ ಮತ್ತು ಕಂದಾಯ ಸದಸ್ಯರ ನೇಮಕಾತಿಗಾಗಿ ಹೆಸರುಗಳನ್ನು ಶಿಫಾರಸು ಮಾಡಲು ನಿಯಮ 7 ರ ಅಡಿಯಲ್ಲಿ ರಚಿಸಲಾದ ಸಮಿತಿ.

(2) ಇಲ್ಲಿ ಬಳಸಲಾದ ಆದರೆ ಈ ನಿಯಮಗಳಲ್ಲಿ ಪರಿಭಾಷಿಸಿರದ ಎಲ್ಲಾ ಇತರ ಪದಗಳು ಮತ್ತು ಪದಾವಳಿಗಳು ಅಧಿನಿಯಮದಲ್ಲಿ ಅವುಗಳಿಗೆ ಗೊತ್ತುಪಡಿಸಿರುವ ಅರ್ಥವನ್ನೇ ಹೊಂದಿರತಕ್ಕದ್ದು.

3. **ಅಧ್ಯಕ್ಷರ ನೇಮಕಾತಿ.** -(1) ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಅಧ್ಯಕ್ಷರನ್ನು, ರಾಜ್ಯ ಸರ್ಕಾರವು ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳೊಂದಿಗೆ ಸಮಾಲೋಚಿಸಿ, ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ಆಗಿದ್ದ ವ್ಯಕ್ತಿಗಳ ಪೈಕಿ ಒಬ್ಬರನ್ನು ನೇಮಿಸತಕ್ಕದ್ದು.

(2) ಯಾರೇ ವ್ಯಕ್ತಿಯು ನೇಮಕಾತಿಯ ದಿನಾಂಕದಂದು ಅರವತ್ತೈದು ವರ್ಷ ವಯಸ್ಸನ್ನು ತಲುಪಿದ್ದರೆ ಅಧ್ಯಕ್ಷರಾಗಿ ನೇಮಕಗೊಳ್ಳಲು ಅರ್ಹರಾಗಿರತಕ್ಕದ್ದಲ್ಲ.

(3) ಅಧ್ಯಕ್ಷರ ಅಧಿಕಾರಾವಧಿಯು ಮೂರು ವರ್ಷಗಳು ಅಥವಾ ಅವರಿಗೆ ಅರವತ್ತೈದು ವರ್ಷ ವಯಸ್ಸು ತುಂಬುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅದು ಆಗಿರುತ್ತದೆ.

(4) ಅಧ್ಯಕ್ಷರು, ತಮ್ಮ ಅಧಿಕಾರಾವಧಿಯಲ್ಲಿ ಇತರ ಯಾವುದೇ ಲಾಭದಾಯಕವಾದ ಹುದ್ದೆಯನ್ನೂ ಅಥವಾ ಕೆಲಸವನ್ನೂ ಹೊಂದಿರತಕ್ಕದ್ದಲ್ಲ.

(5) ರಾಜ್ಯ ಸರ್ಕಾರವು, ನಿರ್ಧರಿಸಬಹುದಾದ ಅಂಥ ಹೆಚ್ಚಿನ ಅವಧಿಗೆ, ಒಟ್ಟಾರೆ ಅರವತ್ತೈದು ವರ್ಷಗಳ ವಯಸ್ಸಿನ ಮಿತಿಯೊಳಗೆ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳೊಂದಿಗೆ ಸಮಾಲೋಚಿಸಿದ ತರುವಾಯ ಅಧ್ಯಕ್ಷರನ್ನು ಮರು ನೇಮಕ ಮಾಡಬಹುದು.

(6) ನೇಮಕಾತಿಯಾಗುವ ಮೊದಲು, ಪ್ರತಿಯೊಬ್ಬ ಆಯ್ಕೆಯಾದ ಅಭ್ಯರ್ಥಿಯು ಅಧ್ಯಕ್ಷರಾಗಿ ತಮ್ಮ ಪ್ರಕಾರ್ಯಗಳಿಗೆ ಪ್ರತಿಕೂಲವಾಗಿ ಪರಿಣಾಮ ಬೀರುವ ಸಂಭವವಿರುವಂತಹ ಯಾವುದೇ ಆರ್ಥಿಕ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿಲ್ಲ ಮತ್ತು ಹೊಂದುವುದಿಲ್ಲ ಎಂಬ ಮುಚ್ಚಳಿಕೆಯನ್ನು ನೀಡತಕ್ಕದ್ದು.

4. **ಅಧ್ಯಕ್ಷರ ನೇಮಕಾತಿಗಾಗಿ ಪರಿಶೀಲನಾ ಸಮಿತಿಯ ರಚನೆ.-** (1) ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಅಧ್ಯಕ್ಷರಾಗಿ ನೇಮಕವಾಗುವುದಕ್ಕೆ ಅರ್ಹ ವ್ಯಕ್ತಿಗಳ ಪಟ್ಟಿಯನ್ನು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಲು ಪರಿಶೀಲನಾ ಸಮಿತಿ ಇರತಕ್ಕದ್ದು.

(2) ಪರಿಶೀಲನಾ ಸಮಿತಿಯು, ಈ ಮುಂದಿನ ಅಧಿಕಾರಿಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ - ಅಧ್ಯಕ್ಷರು;

(ಬಿ) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ - ಸದಸ್ಯ;

(ಸಿ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ ಸದಸ್ಯ- ಕಾರ್ಯದರ್ಶಿ/ಸಂಯೋಜಕ.

(3) ಪರಿಶೀಲನಾ ಸಮಿತಿಯು, ಅರ್ಹ ವ್ಯಕ್ತಿಗಳ ಸೇವಾ ದಾಖಲೆ, ಸಮಗ್ರತೆ ಮತ್ತು ಸೂಕ್ತತೆಯನ್ನು ಪರಿಶೀಲಿಸಿದ ನಂತರ, ರಾಜ್ಯ ಸರ್ಕಾರಕ್ಕೆ ಆದ್ಯತೆಯ ಕ್ರಮದಲ್ಲಿ ಮೂರು ಹೆಸರುಗಳ ಪಟ್ಟಿಯನ್ನು ಶಿಫಾರಸು ಮಾಡತಕ್ಕದ್ದು.

(4) ರಾಜ್ಯ ಸರ್ಕಾರವು, ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳೊಂದಿಗೆ ಸಮಾಲೋಚಿಸಿದ ತರುವಾಯ, ಪರಿಶೀಲನಾ ಸಮಿತಿಯು, ಶಿಫಾರಸು ಮಾಡಿದ ವ್ಯಕ್ತಿಗಳಲ್ಲಿ ಒಬ್ಬರನ್ನು ವಿಶೇಷ ನ್ಯಾಯಾಲಯದ ಅಧ್ಯಕ್ಷರನ್ನಾಗಿ ನೇಮಿಸತಕ್ಕದ್ದು.

5. **ನ್ಯಾಯಿಕ ಸದಸ್ಯರ ನೇಮಕಾತಿ**.- (1) ರಾಜ್ಯ ಸರ್ಕಾರವು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಸೇವೆ ಸಲ್ಲಿಸುತ್ತಿರುವ ಜಿಲ್ಲಾ ನ್ಯಾಯಾಧೀಶರನ್ನು ಇಬ್ಬರು ನ್ಯಾಯಿಕ ಸದಸ್ಯರ ಹುದ್ದೆಗೆ ನಿಯೋಜಿಸಲು ಕರ್ನಾಟಕ ಉಚ್ಚ ನ್ಯಾಯಾಲಯವನ್ನು ಕೋರತಕ್ಕದ್ದು.

(2) ಸೇವೆ ಸಲ್ಲಿಸುತ್ತಿರುವ ಜಿಲ್ಲಾ ನ್ಯಾಯಾಧೀಶರು ನಿಯೋಜನೆಗೆ ಲಭ್ಯವಿಲ್ಲದಿದ್ದರೆ, ರಾಜ್ಯ ಸರ್ಕಾರವು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಕಾರ್ಯವಿಧಾನವನ್ನು ಅನುಸರಿಸಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನ್ಯಾಯಿಕ ಸದಸ್ಯರನ್ನಾಗಿ ನೇಮಿಸಬಹುದು.

(3) ನ್ಯಾಯಿಕ ಸದಸ್ಯರ ಅಧಿಕಾರಾವಧಿಯು ಮೂರು ವರ್ಷಗಳು ಅಥವಾ ಅವರು ಅರವತ್ತೈದು ವರ್ಷ ವಯಸ್ಸನ್ನು ತಲುಪುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅದು ಆಗಿರತಕ್ಕದ್ದು.

(4) ಯಾರೇ ವ್ಯಕ್ತಿಯು, ಸರ್ಕಾರಿ ಸೇವೆಯಿಂದ ವಜಾಗೊಂಡಿದ್ದರೆ, ತೆಗೆದುಹಾಕಲ್ಪಟ್ಟಿದ್ದರೆ ಅಥವಾ ಕಡ್ಡಾಯವಾಗಿ ನಿವೃತ್ತಿಗೊಂಡಿದ್ದರೆ ಅಥವಾ ನೇಮಕಾತಿಯ ದಿನಾಂಕದಂದು ಅರವತ್ತೈದು ವರ್ಷ ವಯಸ್ಸನ್ನು ತಲುಪಿದ್ದರೆ, ಅವರು ನ್ಯಾಯಿಕ ಸದಸ್ಯರಾಗಿ ನೇಮಕಾತಿಗೆ ಅರ್ಹರಾಗಿರತಕ್ಕದ್ದಲ್ಲ.

(5) ನ್ಯಾಯಿಕ ಸದಸ್ಯರನ್ನು 7ನೇ ನಿಯಮದ ಅಡಿಯಲ್ಲಿ ರಚಿಸಲಾದ ಆಯ್ಕೆ ಸಮಿತಿಯ ಶಿಫಾರಸಿನ ಮೇಲೆ ರಾಜ್ಯ ಸರ್ಕಾರವು ನೇಮಿಸತಕ್ಕದ್ದು.

(6) ನೇಮಕಾತಿಗೆ ಮೊದಲು, ಆಯ್ಕೆಯಾದ ಪ್ರತಿಯೊಬ್ಬ ಅಭ್ಯರ್ಥಿಯು, ಸದಸ್ಯನಾಗಿ ತನ್ನ ಪ್ರಕಾರ್ಯಗಳಿಗೆ ಪ್ರತಿಕೂಲ ಪರಿಣಾಮ ಬೀರುವ ಸಂಭವವಿರುವ ಯಾವುದೇ ಆರ್ಥಿಕ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿರುವುದಿಲ್ಲ ಮತ್ತು ಹೊಂದುವುದಿಲ್ಲ ಎಂದು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು.

**6. ಕಂದಾಯ ಸದಸ್ಯರ ನೇಮಕಾತಿ**.- (1) ರಾಜ್ಯ ಸರ್ಕಾರವು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಜಿಲ್ಲಾಧಿಕಾರಿಯವರ ವೃಂದದಲ್ಲಿ ಕನಿಷ್ಠಪಕ್ಷ ಮೂರು ವರ್ಷಗಳಿಗಿಂತ ಕಡಿಮೆಯಿರದ ಅನುಭವ ಹೊಂದಿರುವ ಭಾರತೀಯ ಆಡಳಿತ ಸೇವೆ ಅಥವಾ ಕರ್ನಾಟಕ ಆಡಳಿತ ಸೇವೆಯ ಇಬ್ಬರು ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳನ್ನು ಕಂದಾಯ ಸದಸ್ಯರಾಗಿ ಪ್ರತಿನಿಯೋಜಿಸತಕ್ಕದ್ದು.

(2) ಸೂಕ್ತ ಅರ್ಹ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು ಪ್ರತಿನಿಯೋಜನೆಗೆ ಲಭ್ಯವಿರದ ಸಂದರ್ಭದಲ್ಲಿ, ರಾಜ್ಯ ಸರ್ಕಾರವು, ಈ ನಿಯಮಗಳಲ್ಲಿ ನಿಯಮಿಸಲಾದ ಕಾರ್ಯವಿಧಾನವನ್ನು ಅನುಸರಿಸಿ, ನಿವೃತ್ತ ಜಿಲ್ಲಾಧಿಕಾರಿಯವರನ್ನು ಕಂದಾಯ ಸದಸ್ಯರನ್ನಾಗಿ ನೇಮಕ ಮಾಡಲು ಮುಂದುವರಿಯಬಹುದು.

(3) ಕಂದಾಯ ಸದಸ್ಯರ ಪದಾವಧಿಯು, ಮೂರು ವರ್ಷಗಳು ಅಥವಾ ಅವರು ಅರವತ್ತೈದು ವರ್ಷ ವಯಸ್ಸನ್ನು ತಲುಪುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅದು ಆಗಿರುತ್ತದೆ.

(4) ಯಾರೇ ವ್ಯಕ್ತಿಯು ಸರ್ಕಾರಿ ಸೇವೆಯಿಂದ ವಜಾಗೊಂಡಿದ್ದರೆ, ತೆಗೆದುಹಾಕಲ್ಪಟ್ಟಿದ್ದರೆ ಅಥವಾ ಕಡ್ಡಾಯವಾಗಿ ನಿವೃತ್ತಿಗೊಂಡಿದ್ದರೆ ಅಥವಾ ನೇಮಕಾತಿಯ ದಿನಾಂಕದಂದು ಅರವತ್ತೈದು ವರ್ಷಗಳ ವಯಸ್ಸನ್ನು ತಲುಪಿದ್ದರೆ, ಅವರು ನ್ಯಾಯಿಕ ಸದಸ್ಯನಾ ನೇಮಕಗೊಳ್ಳಲು ಅರ್ಹರಾಗಿರತಕ್ಕದ್ದಲ್ಲ.

(5) ಕಂದಾಯ ಸದಸ್ಯರನ್ನು, ನಿಯಮ 7 ರ ಅಡಿಯಲ್ಲಿ ರಚಿಸಲಾದ ಆಯ್ಕೆ ಸಮಿತಿಯ ಶಿಫಾರಸಿನ ಮೇಲೆ ರಾಜ್ಯ ಸರ್ಕಾರವು ನೇಮಕ ಮಾಡತಕ್ಕದ್ದು.

(6) ನೇಮಕಾತಿಗೆ ಮೊದಲು, ಆಯ್ಕೆಯಾದ ಪ್ರತಿಯೊಬ್ಬ ಅಭ್ಯರ್ಥಿಯು, ತಾನು ಸದಸ್ಯನಾಗಿ ತನ್ನ ಪ್ರಕಾರ್ಯಗಳಿಗೆ ಪ್ರತಿಕೂಲ ಪರಿಣಾಮ ಬೀರುವ ಸಂಭವವಿರುವಂಥ ಯಾವುದೇ ಆರ್ಥಿಕ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿರುವುದಿಲ್ಲ ಮತ್ತು ಹೊಂದುವುದಿಲ್ಲ ಎಂದು ಆತನು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು.

7. **ನ್ಯಾಯಿಕ ಮತ್ತು ಕಂದಾಯ ಸದಸ್ಯರುಗಳ ನೇಮಕಾತಿಗಾಗಿ ಆಯ್ಕೆ ಸಮಿತಿಯ ರಚನೆ.**- ನ್ಯಾಯಿಕ ಮತ್ತು ಕಂದಾಯ ಸದಸ್ಯರುಗಳ ನೇಮಕಾತಿಗೆ ಶಿಫಾರಸು ಮಾಡುವ ಆಯ್ಕೆ ಸಮಿತಿಯು, ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:

(ಎ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ - ಅಧ್ಯಕ್ಷರು;

(ಬಿ) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ - ಸದಸ್ಯರು;

(ಸಿ) ಸರ್ಕಾರದ ಅಪರ/ಜಂಟಿ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ ಕಂದಾಯ) - ಸಂಚಾಲಕರು.

**8. ಆಯ್ಕೆ ಪ್ರಕ್ರಿಯೆ.-** (1) ರಾಜ್ಯ ಸರ್ಕಾರವು ಖಾಲಿ ಹುದ್ದೆಯ ಲಭ್ಯತೆಯ ನಿರೀಕ್ಷಿತ ದಿನಾಂಕಕ್ಕೆ ಕನಿಷ್ಠಪಕ್ಷ ಆರು ತಿಂಗಳ ಮೊದಲು ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸತಕ್ಕದ್ದು.

(2) ಅವಧಿ ಪೂರ್ಣಗೊಂಡ, ರಾಜೀನಾಮೆ, ಮರಣ, ಅಥವಾ ಹೊಸ ಹುದ್ದೆಯ ಸೃಜನೆಯ ಕಾರಣದಿಂದಾಗಿ ಖಾಲಿ ಹುದ್ದೆ ಉಂಟಾದಲ್ಲಿ, ಖಾಲಿ ಹುದ್ದೆ ಉಂಟಾದ ನಿಕಟ ತರುವಾಯ ಪ್ರಕ್ರಿಯೆಯನ್ನು ಪ್ರಾರಂಭಿಸತಕ್ಕದ್ದು.

(3) ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಖಾಲಿಯಿರುವ ಹುದ್ದೆಯ ಜಾಹೀರಾತನ್ನು, ಪ್ರಮುಖ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಯುಕ್ತವೆಂದು ಭಾವಿಸಬಹುದಾದಂಥ ಇತರ ರೀತಿಯಲ್ಲಿ ಪರಿಚಲಿಸತಕ್ಕದ್ದು.

(4) ಅರ್ಜಿಗಳ ಪರಿಶೀಲನೆಯಾದ ತರುವಾಯ, ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಆಯ್ಕೆ ಸಮಿತಿಯ ಮುಂದೆ ಇಡತಕ್ಕದ್ದು.

(5) ಆಯ್ಕೆ ಸಮಿತಿಯು, ಎಲ್ಲಾ ಅರ್ಜಿಗಳನ್ನು ಪರಿಶೀಲಿಸತಕ್ಕದ್ದು ಮತ್ತು ಅದು ಸೂಕ್ತವೆಂದು ಭಾವಿಸಿದರೆ, ಅದು ನಿರ್ಧರಿಸಿದ ಮಾನದಂಡಗಳ ಪ್ರಕಾರ ಅಭ್ಯರ್ಥಿಗಳನ್ನು ಶಾರ್ಟ್ ಲಿಸ್ಟ್ (ಪರಿಷ್ಕೃತ ಪಟ್ಟಿ)ಅನ್ನು ಮಾಡತಕ್ಕದ್ದು.

(6) ಆಯ್ಕೆ ಸಮಿತಿಯು, ರಾಜ್ಯ ಸರ್ಕಾರದ ಪರಿಗಣನೆಗಾಗಿ ಅರ್ಹತಾ ಕ್ರಮದಲ್ಲಿ ಹೆಸರುಗಳ ಪಟ್ಟಿಯನ್ನು ಶಿಫಾರಸು ಮಾಡತಕ್ಕದ್ದು.

(7) ರಾಜ್ಯ ಸರ್ಕಾರವು, ನೇಮಕಾತಿಗಳನ್ನು ಮಾಡುವ ಮೊದಲು ಶಿಫಾರಸು ಮಾಡಲಾದ ಅಭ್ಯರ್ಥಿಗಳ ಪೂರ್ವ ವೃತ್ತಾಂತ ಮತ್ತು ಪರಿಚಯ ಪತ್ರಗಳನ್ನು ಪರಿಶೀಲಿಸತಕ್ಕದ್ದು ಅಥವಾ ಪರಿಶೀಲಿಸುವಂತೆ ಮಾಡತಕ್ಕದ್ದು.

**9. ನೇಮಕಾತಿಯನ್ನು ಹಿಂತೆಗೆದುಕೊಳ್ಳುವುದು ಅಥವಾ ಮುಕ್ತಾಯಗೊಳಿಸುವುದು.-** ರಾಜ್ಯ ಸರ್ಕಾರವು, ಅಂಥ ಸದಸ್ಯನು ದುರ್ನಡತೆ, ಅಸಮರ್ಥತೆ, ಅಥವಾ ವಿಶೇಷ ನ್ಯಾಯಾಲಯದ ಹಿತಾಸಕ್ತಿ ಅಥವಾ ಸ್ವಾತಂತ್ರ್ಯಕ್ಕೆ ಪ್ರತಿಕೂಲವಾಗುವ ಕೃತ್ಯಗಳನ್ನು ಎಸಗಿದ ತಪ್ಪಿತಸ್ಥನೆಂದು ಕಂಡುಬಂದರೆ, ಯಾವುದೇ ನ್ಯಾಯಿಕ ಅಥವಾ ಕಂದಾಯ ಸದಸ್ಯರ ನೇಮಕಾತಿಯನ್ನು ಹಿಂತೆಗೆದುಕೊಳ್ಳಬಹುದು ಅಥವಾ ಮುಕ್ತಾಯಗೊಳಿಸಬಹುದು.

**10. ಪದಾವಧಿ.-** (1) ನ್ಯಾಯಿಕ ಮತ್ತು ಕಂದಾಯ ಸದಸ್ಯರು, ಮೂರು ವರ್ಷಗಳ ಅವಧಿಗೆ ಅಥವಾ ನಿಗದಿಪಡಿಸಲಾದ ವಯೋಮಿತಿಯನ್ನು ಅವರು ತಲುಪುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಧಿಕಾರ ಹೊಂದಿರತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



(2) ಸಾಮಾನ್ಯವಾಗಿ ನ್ಯಾಯಿಕ ಅಥವಾ ಕಂದಾಯ ಸದಸ್ಯನು, ಮರು-ನೇಮಕಾತಿಗೆ ಅರ್ಹನಾಗಿರತಕ್ಕದ್ದಲ್ಲ, ಆದಾಗ್ಯೂ, ಆತನನ್ನು, ಒಟ್ಟಾರೆ ಅರವತ್ತೈದು ವರ್ಷಗಳ ವಯೋಮಿತಿಯೊಳಗೆ, ಸರ್ಕಾರವು ನಿರ್ಧರಿಸಬಹುದಾದಂಥ ಹೆಚ್ಚಿನ ಅವಧಿಗೆ ಮರು-ನೇಮಕ ಮಾಡಬಹುದು.

11. **ಅರ್ಥವಿವರಣೆ**.- ಈ ನಿಯಮಗಳ ಯಾವುದೇ ಉಪಬಂಧಗಳ ಅರ್ಥವಿವರಣೆಯ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಅದನ್ನು, ಕಂದಾಯ ಇಲಾಖೆಗೆ ಉಲ್ಲೇಖಿಸತಕ್ಕದ್ದು ಮತ್ತು ಅದರ ಮೇಲಿನ ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ರಾಜೇಂದರ್ ಕುಮಾರ್ ಕಟಾರಿಯಾ)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕಂದಾಯ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH